<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 123/2018**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ  ಶಫಿ ಉಲ್ಲಾ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಮೊಹಮದ್ ಖಾಸಿಂ | 13 | 16 |
| ವಯಸ್ಸು | 62 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **04.04.2026.** | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸ ಸ್ಥಳ | ಬೆಂಗಳೂರು | | |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಈಗ ನನಗೆ ತೋರಿಸಿದ ದಾಖಲೆಗಳಲ್ಲಿ ಇರುವ ಸಹಿ ನನ್ನದಾಗಿದ್ದು, ಆ ದಾಖಲೆಗಳನ್ನು ನಿಶಾನೆ ಪಿ20 ರಿಂದ 22 ಎಂದು ಈಗಾಗಲೇ ಗುರುತಿಸಲಾಗಿದ್ದು, ಅವುಗಳಲ್ಲಿರುವ ನನ್ನ ಸಹಿಗಳನ್ನು ನಿಶಾನೆ ಪಿ20(ಬಿ) ಯಿಂದ 22(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಈಗ್ಗೆ 9-10 ವರ್ಷಗಳ ಹಿಂದೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ನಾನು ವಾಹನ ಹರಾಜಿಗೆ ಹೋಗಿದ್ದಾಗ ಪೊಲೀಸರು ಸದರಿ ಸಹಿಗಳನ್ನು ತೆಗೆದುಕೊಂಡರು. ಅವುಗಳಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನನ್ನ ಸಮಕ್ಷಮ ಒಂದು ಫೋನ್ ಅನ್ನು ಬಟ್ಟೆ ಚೀಲದಲ್ಲಿ ಹಾಕಿ ತೆಗೆದುಕೊಂಡರು. ಎರಡು ಫೋನ್ ಗಳನ್ನು ತೆಗೆದುಕೊಂಡಿರಬಹುದು. 4 ನೇ ಆರೋಪಿ, 5 ನೇ ಆರೋಪಿ ಹಾಗೂ 6 ನೇ ಆರೋಪಿ ಸಲಾಮತ್ ರವರ ಪರಿಚಯ ನನಗೆ ಇರುವುದಿಲ್ಲ. ನನಗೆ ಓದಲು, ಬರೆಯಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ಪೊಲೀಸ್ ಠಾಣೆಯಲ್ಲಿ 4 ನೇ ಆರೋಪಿ ಒಂದು ಸ್ಯಾಮ್ ಸಂಗ್ ಮೊಬೈಲ್ ಫೋನ್ ಹಾಜರುಪಡಿಸಿದ್ದು ಅದನ್ನು ಪೊಲೀಸರು ನಮ್ಮ ಸಮಕ್ಷಮ ಠಾಣೆಯಲ್ಲಿ ರಾತ್ರಿ 8.30 ರಿಂದ 9.00 ಗಂಟೆ

ಸಮಯದಲ್ಲಿ ನಿಶಾನೆ ಪಿ20 ಮಹಜರ್ ಮೂಲಕ ವಶಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತ್ಯೇಕಿಸಲ್ಪಟ್ಟ 5 ನೇ ಆರೋಪಿ ತಿಮ್ಮರಾಜು ಇವರು ಕಪ್ಪು ಸ್ಯಾಮ್ ಸಂಗ್ ಕಂಪನಿಯ ಮೊಬೈಲ್ ಹಾಗೂ ಕಪ್ಪು, ಕೆಂಪು ಬಣ್ಣದ ಕಾರ್ಬನ್ ಕಂಪನಿಯ ಮೊಬೈಲ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಮ್ಮ ಸಮಕ್ಷಮ ಠಾಣೆಯಲ್ಲಿ ರಾತ್ರಿ 9.05 ರಿಂದ 9.45 ರ ಸಮಯದಲ್ಲಿ ನಿಶಾನೆ ಪಿ21 ಮೂಲಕ ಅಮಾನತ್ತುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಎಸ್ ಸಿ ನಂಬರ್ 102/2019 ಕೇಸಿನ ಆರೋಪಿ ಸಲಾಮತ್ ಇವರು ಠಾಣೆಯಲ್ಲಿ ಒಂದು ಕಪ್ಪು ಬಣ್ಣದ ಚಿಕ್ಕ ಮೊಬೈಲ್ ಅನ್ನು ಹಾಜರುಪಡಿಸಿದ್ದು ಅದನ್ನು ಪೊಲೀಸರು ರಾತ್ರಿ 9.45 ರಿಂದ 10.15 ರ ಸಮಯದಲ್ಲಿ ನಿಶಾನೆ ಪಿ22 ರ ಮೂಲಕ ನಮ್ಮ ಸಮಕ್ಷಮ ಜಪ್ತಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಪಿ20 ರಿಂದ 22 ರ ಮಹಜರ್ ಗಳ ವಿಚಾರಗಳನ್ನು ನನಗೆ ಓದಿ ತಿಳಿಸಿದ ನಂತರ ಅವುಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಹೇಳಿಕೆಯ ವಿಚಾರವನ್ನು ಓದಿ ತಿಳಿಸಿದ್ದು ಅದರಂತೆ ತಾನು ಹೇಳಿಕೆ ನೀಡಿಲ್ಲ ಎಂದು ಉತ್ತರಿಸಿದ್ದು , ಸದರಿ ಹೇಳಿಕೆಯನ್ನು ನಿಶಾನೆ ಪಿ24 ಎಂದು ಗುರುತಿಸಲಾಯಿತು. ನಾನು ನಿಶಾನೆ ಪಿ24 ರಂತೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.